ತವಡಿ ಬಂದರಿನ ನಿರ್ವಹಣೆ ಕುರಿತು

1673 - ಡಾ||ಎಂ. ಪಿ. ಕರ್ಕಿ (ಕುಮಟಾ) : ಮಾನ್ಯ ಬಂದರು ಮತ್ತು ಮೀನುಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ತವಡಿ ಬಂದರಿನ ನಿರ್ವಹಣೆ, ಸಿಬ್ಬಂದಿ ಕೊರತೆಯಿಂದಾಗಿ ಸಮರ್ಪಕವಾಗಿ, ಆಗುತ್ತಿಲ್ಲವೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?*

ಆ) *ಈ ಬಂದರಿನ ಉಪಯೋಗ ಸಮರ್ಪಕವಾಗುವಂತೆ ಇನ್ನೂ ಯಾವ ಕ್ರಮವನ್ನು ಕೈಗೊಳ್ಳಲಿದೆ?*

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಬಂದರು ಮತ್ತು ಮೀನುಗಾರಿಕೆ ಸಚಿವರು) :

ಅ) ಇಲ್ಲಾ. ಮಂಜೂರಾದ ಪೂರ್ಣ ಸಿಬ್ಬಂದಿ ಈ ಬಂದರಿನಲ್ಲಿ ಕಾರ್ಯ ನಿರ್ವಹಿಸುತ್ತಿದೆ.

ಆ) ಬಂದರನ್ನು ಖಾಸಗಿ ವಲಯದ ಬಂಡವಾಳ ಹೂಡಿಕೆಯಿಂದ ಅಭಿವೃದ್ಧಿಪಡಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ವರಕವಿ ದ.ರಾ ಬೇಂದ್ರೆ ಜನ್ಮ ಶತಮಾನೋತ್ಸವ ಸಮಿತಿ

1674 - ಶ್ರೀ ಡಿ.ಆರ್. ಪಾಟೀಲ್ (ಗದಗ್) : ಮಾನ್ಯ ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ವರಕವಿ ದ.ರಾ. ಬೇಂದ್ರೆ ಅವರ ಜನ್ಮ ಶತಮಾನೋತ್ಸವ ಆಚರಣೆ ನಿಮಿತ್ತ ಯಾವ ಯಾವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು? ಅದರಲ್ಲಿ ಯಾವ ಯಾವ ಕಾರ್ಯಕ್ರಮಗಳನ್ನು ಮಾಡಲಾಯಿತು?*

ಆ) *ಡಾ|| ದ. ರಾ. ಬೇಂದ್ರೆ ಶತಮಾನೋತ್ಸವ ಅರ್ಥಪೂರ್ಣವಾಗಿ ಆಚರಿಸದಿರಲು ತೊಂದರೆಗಳೇನು ಎದುರಾದವು?*

ಇ) *ದ.ರಾ. ಬೇಂದ್ರೆ ಶತಮಾನೋತ್ಸವ ಆಚರಣೆ ಕುರಿತು ರಾಜ್ಯಮಟ್ಟದಲ್ಲಿ ಮುಖ್ಯಮಂತ್ರಿ ನೇತೃತ್ವದ ಸಮಿತಿ ಕೈಗೊಂಡ ನಿರ್ಧಾರಗಳಲ್ಲಿ ಎಷ್ಟು ನಿರ್ಣಯಗಳು ಅನುಷ್ಠಾನಗೊಂಡವು?*

ಈ) *ದ.ರಾ. ಬೇಂದ್ರೆ ಸಾಹಿತ್ಯ ಪ್ರಕಟಣೆಯ ದೆಶೆಯಲ್ಲಿ ಸರ್ಕಾರ ಈವರೆಗೆ ಯಾವ ಕ್ರಮ ಕೈಗೊಂಡಿದೆ? ಎಷ್ಟು ಗ್ರಂಥಗಳ ಪ್ರಕಟಣೆಯಾಗಿದೆ? ಈ ಸಾಹಿತ್ಯ ಪ್ರಕಟಣೆಯ ಜವಾಬ್ದಾರಿಯನ್ನು ಯಾರು ನಿರ್ವಹಿಸುತ್ತಿದ್ದಾರೆ?*

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ಸಚಿವರು) :

ಅ) ಹಮ್ಮಿಕೊಂಡಿರುವ ಕಾರ್ಯಕ್ರಮಗಳು

1) ಡಾ|| ದ.ರಾ ಬೇಂದ್ರೆ ಅವರ ಹೆಸರಿನಲ್ಲಿ ಧಾರವಾಡದಲ್ಲಿ ಸ್ಮಾರಕ ಭವನ ನಿರ್ಮಾಣ ಮಾಡುವುದು.

2) ಡಾ|| ದ.ರಾ. ಬೇಂದ್ರೆ ಹೆಸರಿನಲ್ಲಿ ಧಾರವಾಡದಲ್ಲಿ ಟ್ರಸ್ಟ್‌ನ್ನು ರಚಿಸುವುದು.

3) ರಾಜ್ಯ ಮತ್ತು ಹೊರರಾಜ್ಯಗಳ ವಿಶ್ವವಿದ್ಯಾನಿಲಯಗಳಲ್ಲಿ ವಿವಿಧ ಸಾಹಿತ್ಯಕ : ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ವ್ಯವಸ್ಥೆ ಮಾಡುವುದು.

4) ಡಾ|| ದ.ರಾ. ಬೇಂದ್ರೆ ಅವರ ಸಮಗ್ರ ಸಾಹಿತ್ಯ ಪ್ರಕಟಣೆ ಮಾಡುವುದು.

5) ಡಾ|| ದ.ರಾ. ಬೇಂದ್ರೆ ಅವರ ನೆನಪಿಗಾಗಿ ಅಂಚೆ ಚೀಟಿ ಹೊರತರುವುದು.

6) ಡಾ|| ದ.ರಾ. ಬೇಂದ್ರೆ ಅವರ ಹೆಸರಿನಲ್ಲಿ ಧಾರವಾಡದ ಕರ್ನಾಟಕ ವಿಶ್ವ-ವಿದ್ಯಾನಿಲಯ : ಹಂಪಿ ವಿಶ್ವವಿದ್ಯಾನಿಲಯಗಳಲ್ಲಿ ಅಧ್ಯಯನ ಪೀಠ ಸ್ಥಾಪಿಸುವುದು.

7) ಬೇಂದ್ರೆ ಅವರ ಜೀವನ ಮತ್ತು ಸಾಧನೆಗಳ ಕುರಿತು ಸಾಕ್ಷ್ಯಚಿತ್ರ ತಯಾರಿಸುವುದು.

8) ಶತಮಾನನೋತ್ಸವ ಉದ್ಘಾಟನೆ ಮತ್ತು ಸಮಾರೋಪ ಸಮಾರಂಭ ಏರ್ಪಡಿಸಿ ಕಾರ್ಯಕ್ರಮಗಳನ್ನು ನಡೆಸುವುದು ಮುಂತಾದವುಗಳು.

ಅನುಷ್ಠಾನಗೊಳಿಸಿದ ಕಾರ್ಯಕ್ರಮಗಳು :

1) ಡಾ||ದ.ರಾ. ಬೇಂದ್ರೆ ಅವರ ಹೆಸರಿನಲ್ಲಿ ಧಾರವಾಡದಲ್ಲಿ ಟ್ರಸ್ಟ್‌ನ್ನು ರಚಿಸಲಾಗಿದೆ.

2) ಸ್ಮಾರಕ ಭವನ, ನಿರ್ಮಾಣ ಕಾರ್ಯನಡೆಯುತ್ತಿದ್ದು ಪ್ರಗತಿಯಲ್ಲಿದೆ.

3) ಸರ್ವೋದಯ ಯುಗ ಮತ್ತು ಬೇಂದ್ರೆ ಕಾವ್ಯ ವಿಷಯ ಕುರಿತು ವಿಚಾರಸಂಕಿರಣ, ಬೇಂದ್ರೆ ಕಾವ್ಯ ದರ್ಶನ, ನೃತ್ಯರೂಪಕ ಬೇಂದ್ರೆ ಕಾವ್ಯ ಗಾಯನ, ಬೇಂದ್ರೆ ಕಾವ್ಯ ಸಂಜೆ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಲಾಗಿದೆ.

4) ಡಾ|| ದ.ರಾ. ಬೇಂದ್ರೆಯವರೂ ಸೇರಿದಂತೆ ಕರ್ನಾಟಕದ ಎಲ್ಲಾ ಜ್ಞಾನಪೀಠ ಪ್ರಶಸ್ತಿ ಪಡೆದವರ ಮುಖವಿರುವ ಅಂಚೆ ಚೀಟಿಯನ್ನು ಕೇಂದ್ರ ಸರ್ಕಾರ ಹೊರತಂದಿದೆ.

5) ಈಗಾಗಲೇ ವಾರ್ತಾ ಮತ್ತು ಪ್ರಚಾರ ಇಲಾಖೆ, ಬೇಂದ್ರೆ ಅವರ ಸಾಕ್ಷ್ಯಚಿತ್ರ ತಯಾರಿಸಿದೆ.

6) ದಿನಾಂಕ:1.2.1995 ರಂದು ಧಾರವಾಡದಲ್ಲಿ ಶತಮಾನೋತ್ಸವ ಉದ್ಘಾಟನ ಸಮಾರಂಭ ನಡೆದಿದೆ.

ಅ) ಯಾವುದೇ ತೊಂದರೆ ಇರಲಿಲ್ಲ

ಇ) ಕ್ರಮ ಸಂಖ್ಯೆ (ಅ) ರಲ್ಲಿ ವಿವರ ನೀಡಲಾಗಿದೆ.

ಈ) 1) ಡಾ||ದ.ರಾ. ಬೇಂದ್ರೆ ಅವರ ಪ್ರಕಟಿತ ಮತ್ತು ಅಪ್ರಕಟಿತ ಸಾಹಿತ್ಯ ಗ್ರಂಥಗಳ ಪ್ರಕಟಣೆ ಕಾರ್ಯವನ್ನು ಸರ್ಕಾರದ ಕನ್ನಡ ಪುಸ್ತಕ ಪ್ರಾಧಿಕಾರಕ್ಕೆ ವಹಿಸಿದೆ.

2) ಡಾ. ದ.ರಾ. ಬೇಂದ್ರೆ ಅವರ ಹೆಸರಿನಲ್ಲಿ ಸರ್ಕಾರದ ರಚಿಸಿದ ಟ್ರಸ್ಟ್ ಕೂಡ ಪ್ರಕಟಣೆ ಕಾರ್ಯ ನಿರ್ವಹಿಸುತ್ತಿದೆ.

ಸಮುದ್ರದಲ್ಲಿ ಮೀನುಗಾರರಿಗೆ ಉಂಟಾಗುವ ಅವಘಡಗಳನ್ನು ತಡೆಯಲು ಕೈಗೊಂಡಿರುವ ಮುಂಜಾಗರೂಕತಾ ಕ್ರಮಗಳು

1675 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೀನುಗಾರಿಕೆ ಮತ್ತು ಬಂದರು ಇಲಾಖೆಯು ಮೀನುಗಾರರಿಗೆ ಅವಘಡಗಳನ್ನು ತಡೆಯಲು ಮುಂಜಾಗರೂಕತೆ ಕ್ರಮಗಳನ್ನು ಕೈಗೊಳ್ಳಲಾಗಿದೆಯೇ?

ಆ) ಹಾಗಿದ್ದಲ್ಲಿ ಇದರ ಬಗ್ಗೆ ಅಲ್ಲಿರುವ ಮೂಲಭೂತ ಸೌಲಭ್ಯಗಳೇನು?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು) :

ಅ) ಹೌದು.

ಆ) ಮುಖ್ಯ ಮೀನುಗಾರಿಕೆ ಬಂದರುಗಳಲ್ಲಿ ನದಿ ಮುಖಜಗಳಲ್ಲಿ ಆಗುವ ಅವಘಡಗಳನ್ನು ತಪ್ಪಿಸಲು ತಡೆಗೋಡೆಗಳನ್ನು (ಬ್ರೇಕ್ ವಾಟರ್) ನಿರ್ಮಾಣ ಮಾಡಲಾಗಿದೆ. ಬಂದರುಗಳಲ್ಲಿ ಕಾಲಕಾಲಕ್ಕೆ ಹೂಳೆತ್ತುವಿಕೆ ಕೈಗೊಳ್ಳಲಾಗುತ್ತಿದೆ. ಮುಖ್ಯ ಬಂದರುಗಳಲ್ಲಿ ದೀಪಸ್ತಂಭ ಮತ್ತು ಎಚ್ಚರಿಕೆಯ ಸಂಕೇತಗಳನ್ನು ಬಂದರು ಇಲಾಖೆಯಿಂದ ಪ್ರದರ್ಶಿಸಲಾಗುತ್ತಿದೆ. ಇದಲ್ಲದೆ ರೇಡಿಯೋ ಮೂಲಕ ಮೀನುಗಾರರಿಗೆ ಹವಾಮಾನ ಮುನ್ಸೆಚ್ಚರಿಕೆಯನ್ನು ನೀಡಲಾಗುತ್ತಿದೆ. ಮಲ್ಪೆ ಮತ್ತು ಹೊನ್ನಾವರದಲ್ಲಿ ವಿಹೆಚ್‌ಎಫ್ ಪ್ರೇಕ್ಷಕ ಗೋಪುರಗಳನ್ನು ಸ್ಥಾಪಿಸಲಾಗಿದ್ದು ವಾಕೀ-ಟಾಕಿಗಳನ್ನು ನೀಡಿ ಮೀನುಗಾರರಲ್ಲಿ ಸಂಪರ್ಕವನ್ನು ಕಲ್ಪಿಸಲಾಗಿದೆ.

ಮೀನುಗಾರರು ತೀರದ ಸಂಪರ್ಕ ಹೊಂದಲು ರೇಡಿಯೋ ಟೆಲಿಫೋನ್ ಖರೀದಿಸಲು ಸಹಾಯಧನವನ್ನು ನೀಡಲಾಗುತ್ತಿದೆ ಮತ್ತು ರಾತ್ರಿವೇಳೆಯಲ್ಲಿ ಸುರಕ್ಷಿತವಾಗಿ ತೀರವನ್ನು ಸೇರಲು ಮೀನುಗಾರ ಕರಾವಳಿ ಗ್ರಾಮಗಳಲ್ಲಿ ಮಾರ್ಗಸೂಚಿ ದೀಪಗಳನ್ನು ಅಳವಡಿಸಲಾಗುತ್ತಿದೆ.

ದ. ಕನ್ನಡ ಜಿಲ್ಲೆಯ ಲೋಕೋಪಯೋಗಿ ಇಲಾಖೆ ರಸ್ತೆಗಳು

1676 - ಶ್ರೀ ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅತೀ ಮಳೆಯಿಂದ ಭೂ ಕುಸಿತ ಉಂಟಾಗಿ ಲೋಕೋಪಯೋಗಿ ರಸ್ತೆಗಳು ಹಾಳಾಗಿ ವಾಹನ ಸಂಚಾರ ಸ್ಥಗಿತವಾಗಿರುವುದು ನಿಜವೇ; ಆಗಿದ್ದಲ್ಲಿ ಇದನ್ನು ಸರಪಡಿಸಲಾಗಿದೆಯೇ?